ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ಸದಸ್ಯರು ಹೇಳತಕ್ಕಂಥಾದ್ದು ವಾಸ್ತವಾಂಶದಿಂದ ಕೂಡಿದೆ. ಅದರಲ್ಲಿ ಏನೊ ಉತ್ಪ್ರೇಕ್ಷೆ ಇಲ್ಲ. ಇದಕ್ಕೆ ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡ ಬೇಕಾಗಬಹುದು, ಈ ಬಗ್ಗೆ ವರದಿ ಬಂದಿದೆ. ಈ ವರದಿ ೧೯೭೭–೭೮ರಲ್ಲಿಯೇ ಬಂದಿದೆ. ಆದರೆ ಇಂದು ಕೆ.ಆರ್.ಎಸ್. ರೀಸರ್ಚ್ ಇನ್‌ಸ್ಟಿಟ್ಯೂಟ್‌ನವರು ಕೆಲವೊಂದು ಮಾಹಿತಿ ಕೇಳಿದ್ದಾರೆ.

ಒಂದುಕಡೆ ಈ ಉಪ್ಪು ನೀರು ಆಣೆಕಟ್ಟು ಡ್ಯಾಮೇಜ್ ಆಗುವುದಕ್ಕೆ ಒಂದು ಕಾರಣ ಎಂದು ಹೇಳಿದ್ದಾರೆ. ಹಿಂದಿನ ಮಾಹಿತಿಯಿಂದ ಹಲವಾರು ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳ ಬೇಕಾಗುತ್ತದೆ. ನನಗೆ ಈ ಸದನದ ಅನುಮತಿ ಇದೆ. ಬರುವ ಏಪ್ರಿಲ್ ೧ ರಿಂದ ಇವೆಲ್ಲಾ ಸ್ಥಳೀಯ ಸಂಸ್ಥೆಗಳ ವಶಕ್ಕೆ ಹೋಗುತ್ತವೆ. ನಾನು ತಾಂತ್ರಿಕವಾಗಿ ಏನೇನು ಮಾಹಿತಿ ಒದಗಿಸಬೇಕೋ, ಪರಿಣತ ರಿಂದ ಸೂಚನೆ ಕೊಡಬೇಕೋ ಅವೆಲ್ಲವನ್ನೂ ಮಾಡುತ್ತೇನೆ. Technical guidence or advice I can give.

ಶ್ರೀ ವಸಂತ ವಿ. ಸಾಲ್ಯಾನ.— ೧೯೮೫ನೇ ಇಸವಿಯಿಂದ ಜನತಾ ಪಕ್ಷದ ಸರ್ಕಾರ ಬಂದಮೇಲೆ ಇದುವರೆಗೂ ಈ ಕೆಲಸವನ್ನು ಮಾಡಬಹುದಿತ್ತು, ಮಟ್ಟು ಆಣೆಕಟ್ಟು ವಿಚಾರವಾಗಿ ಅನೇಕಬಾರಿ ಮನವಿ ಸಹ ಕೊಟ್ಟಿದ್ದೇನೆ. ಸಾವಿರಾರು ಎಕರೆ ಭೂಮಿ ಹಾಗೆಯೇ ಬಿದ್ದಿದೆ. ಒಂದು ಬೆಳೆಯನ್ನೂ ಬೆಳೆಯುವುದಕ್ಕಾಗುವುದಿಲ್ಲ. ಆದುದರಿಂದ ಈ ಮಟ್ಟು ಆಣೆಕಟ್ಟನ್ನು ಈ ಸಾಲಿನಲ್ಲಿಯೇ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನನಗೆ ಇಲ್ಲಿ ಪಕ್ಷದ ರಾಜಕಾರಣ ಮಾಡಬೇಕೆಂದು ಇಲ್ಲ. ನಿಮ್ಮ ಗಮನಕ್ಕೆ ತರುತ್ತೇನೆ. ಏಕೆಂದರೆ ಹಣ ಕೊಟ್ಟಿರುವುದು ಕಡಿಮೆ.

The following repair works have been carried out during 1985–86. I do not want to mix politics in these matters.

i) Providing planks to S. W. E. D. at Nadsal in Udupi taluk Rs. 10,000/–

ii) Providing planks to S.W.E.D. at Arroor in Udupi taluk Rs. 10,000/–

iii) Providing planks to Palimar Aniovt in Udupi taluku Rs. 10,000/—

iv) Providing planks to S.W.E.D. at Kurkal Rs. 10.

ಈ ವರ್ಕ್ಸ್ ತೆಗೆದುಕೊಂಡಿದ್ದೇವೆ. ಕೆ. ಆರ್. ಎಸ್. ರೀಸರ್ಚ್ ಇನ್‌ಸ್ಟಿಟ್ಯೂಟ್‌ನವರು ರಿಪೇರಿ ಮತ್ತಿತರ ಎಲ್ಲಾ ವರದಿ ಕೊಡುತ್ತೇವೆಂದು ಹೇಳಿದ್ದಾರೆ. ನಿಮ್ಮ ಪರವಾಗಿ ಮಾನ್ಯ ನಜೀರ್‌ಸಾಬ್ ರವರನ್ನೂ ಇದರ ಬಗ್ಗೆ ವಿಶೇಷವಾದ ಗ್ರಾಂಟ್ ಏನಾದರೂ ಕೊಡುವುದಕ್ಕೆ ಸಾಧ್ಯವಿದ್ದರೆ, ಕೊಡಿ ಎಂದು ಕೇಳಿಕೊಳ್ಳುತ್ತೇನೆ.

## ಗಂಬ್ಳಿ ತಾಲ್ಲೂಕಿನಲ್ಲಿರುವ ಚೇಳೂರಿನ ಮಹಾತ್ಮಗಾಂಧಿ ಸ್ಮಾರಕ ಮಹಾ ವಿದ್ಯಾಲಯ

೭೧. ಶ್ರೀ ಜಿ. ಎಸ್. ಶಿವಸಂಜಪ್ಪ (ಗಂಬ್ಳಿ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಳಿ ತಾಲ್ಲೂಕು ಚೇಳೂರಿನ ಮಹಾತ್ಮಾಗಾಂಧಿ ಸ್ಮಾರಕ ವಿದ್ಯಾ ಸಂಸ್ಥೆಯವರ ಕಿರಿಯ ಕಾಲೇಜಿಗೆ ಮಂಜೂರಾತಿಯನ್ನು ಯಾವ ವರ್ಷದಲ್ಲಿ ನೀಡಲಾಯಿತು ?

ಆ) ಸದರಿ ಕಾಲೇಜನ್ನು ಯಾವ ಕಟ್ಟಡದಲ್ಲಿ ನಡೆಸಲಾಗುತ್ತಿದೆ ?

ಇ) ಸದರಿ ವಿದ್ಯಾ ಸಂಸ್ಥೆಯವರ ಬಗ್ಗೆ ದೂರುಗಳು ಏನಾದರೂ ಬಂದಿವೆಯೇ ?

ಈ) ಹಾಗಿದ್ದಲ್ಲಿ ಯಾವ ವರ್ಷದಿಂದ, ದೂರುಗಳು ಬಂದಿವೆ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಉ) ಸದರಿ ಸಂಸ್ಥೆಯವರು ಕಾಲೇಜನ್ನು ನಡೆಸುವ ಬಗ್ಗೆ ಅಸಮರ್ಥವಾಗಿರುವರೆಂದು ಸಾರ್ವಜನಿಕರು ಅನೇಕ ವರ್ಷಗಳಿಂದ ಮನವಿಯ ಮೂಲಕ ತಿಳಿಸಿ ಸದರಿ ಕಾಲೇಜನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಒತ್ತಾಯಿಸಿರುವುದು ನಿಜವಲ್ಲವೆ, ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ೧೯೮೦–೮೧ನೇ ಶೈಕ್ಷಣಿಕ ವರ್ಷದಲ್ಲಿ.

ಆ) ಸರ್ಕಾರಿ ಪ್ರೌಢಶಾಲೆಯು ಕಟ್ಟಡದಲ್ಲಿ.

ಇ) ಬಂದಿವೆ.

ಈ) ೧೯೮೫–೮೬ನೇ ಶೈಕ್ಷಣಿಕ ವರ್ಷದಿಂದ ದೂರುಗಳು ಬಂದಿವೆ. ಪದವಿಪೂರ್ವ ನಿರ್ದೇಶಕರು ಈ ಬಗ್ಗೆ ವಿಚಾರಣೆ ನಡೆಸಿದ್ದಾರೆ. ಸದರಿ ಕಾಲೇಜಿನಲ್ಲಿ ಪ್ರಾಂಶುಪಾಲರನ್ನು ನೇಮಿಸುವ ಬಗೆ ಯೂ ಹಾಗೂ ನೌಕರರಿಗೆ ಸಂಬಳ ಕೊಡುವ ಬಗ್ಗೆ, ವೇತನ ಬಟವಾಡೆ ಅಧಿಕಾರಿಯನ್ನು ನೇಮಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ನಿಯಮಗಳ ರೀತಿ ಪ್ರಾಂಶುಪಾಲರನ್ನು ನೇಮಿಸಬೇಕೆಂದೂ ಗುಬ್ಬಿಯ ಸಹಾಯಕ ಶಿಕ್ಷಣಾಧಿಕಾರಿಗಳನ್ನು ಸಂಬಳ ಬಟವಾಡೆ ಅಧಿಕಾರಿಯಾಗಿ ನೇಮಿಸಬೇಕೆಂದೂ ಆದೇಶಿಸಲಾಗಿದೆ.

ಉ) ದಿನಾಂಕ ೨೦–೧೧–೧೯೮೬ ರಂದು ಪದವಿಪೂರ್ವ ಶಿಕ್ಷಣ ನಿರ್ದೇಶಕರಿಗೆ ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಅವರು ಪರಿಶೀಲಿಸುತ್ತಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಅಧ್ಯಕ್ಷರೇ, ಬಹುಶಃ ಮಾನ್ಯ ಮಂತ್ರಿಯವರಿಗೆ ಇದರ ಬಗ್ಗೆ ಸರಿಯಾದ ವರದಿ ಬಂದಿಲ್ಲವೆಂದು ನನ್ನ ಭಾವನೆ ಇದೆ. ಏತಕ್ಕೆಂದರೆ ೨೦–೧೧–೮೬ ರಂದು ಒಂದು ಕಂಪ್ಲೇಂಟ್ ಬಂದಿದೆ ಎಂದು ತಾವು ಹೇಳಿದ್ದೀರಿ. ಇದು ಸತಕ್ಕೆ ದೂರವಾದುದು. ದಿನಾಂಕ ೧೨–೯–೮೬ರ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ 'ಕಾಲೇಜ್ ಸ್ಯಾನ್ಸ್ ಬೇಸಿಕ್ ಅಮಿನಿಟೀಸ್' ಎಂದೂ, ೨೯–೯–೮೬ರ ಕನ್ನಡ ಪ್ರಭ ಪತ್ರಿಕೆಯಲ್ಲಿ 'ದಿಕ್ಕುಗೆಟ್ಟಿರುವ ಕಾಲೇಜು ಸಂಬಳ ಕಾಣದ ಶಿಕ್ಷಕರು' ಎಂದೂ, ೨೯–೯–೮೬ರ ಕನ್ನಡ ಪ್ರಭ ಪತ್ರಿಕೆಯ 'ಓದುಗ ಜನಮೇಜನ' ಎಂಬ ವಿಭಾಗದಲ್ಲಿಯೂ, ದಿನಾಂಕ ೨೩–೯–೮೬ರ ಅಮರ ಸಂದೇಶ ಪತ್ರಿಕೆಯಲ್ಲಿ 'ಮಹಾತ್ಮಾಗಾಂಧಿ ಸ್ಮಾರಕ ವಿದ್ಯಾ ಸಂಸ್ಥೆಯ ಕರ್ಮಕಾಂಡ' ಎಂದೂ ದಿನಾಂಕ ೨೧–೯–೮೬ರ ವಿಜಯ ವಾಣಿ ಪತ್ರಿಕೆಯಲ್ಲಿ 'ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜಿನ ದುರಾಡಳಿತವನ್ನು ತಪ್ಪಿಸಲು ಸರಕಾರವೇ ಕಾಲೇಜನ್ನು ವಹಿಸಿಕೊಳ್ಳಬೇಕು ಎಂದೂ, ದಿನಾಂಕ ೭–೮–೮೬ರ ವಿಜಯ ವಾಣಿ ಪತ್ರಿಕೆಯಲ್ಲಿ 'ಎರಡು ವಿದ್ಯಾ ಸಂಸ್ಥೆಗಳ ಕಾರ್ಯದರ್ಶಿಯಿಂದ ಸಮಾಜ ಕಲ್ಯಾಣ ಇಲಾಖೆಗೆ ೧೨,೫೦೦ ರೂಪಾಯಿಗಳ ವಂಚನೆ, ಕಾರ್ಯದರ್ಶಿಗಾಗಿ ಪೋಲೀಸರ ಹುಡುಕಾಟ' ಎಂದೂ ದಿನಾಂಕ ೭–೧೦–೮೬ರ ಅಮರ ಸಂದೇಶ ಪತ್ರಿಕೆಯಲ್ಲಿ ಚೇಳೂರಿನ ವಿದ್ಯಾ ಸಂಸ್ಥೆಯ ಬಗ್ಗೆ ಮಂಖ್ಯಮಂತ್ರಿಗಳ ಗಮನಕ್ಕೆ' ಎಂದೂ ದಿನಾಂಕ ೧೨–೧೦–೮೬ರ ವಿಜಯ ವಾಣಿ ಪತ್ರಿಕೆಯಲ್ಲಿ, ಚೇಳೂರು ಕಾಲೇಜಿನ ಉಪನ್ಯಾಸಕರು ಮೆರವಣಿಗೆಯಲ್ಲಿ ಹೋಗಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು ಎಂದೂ, ದಿನಾಂಕ ೨೩–೧೦–೮೬ರ ತುಮಕೂರು ವಾರ್ತೆ ಪತ್ರಿಕೆಯಲ್ಲಿ 'ಚೇಳೂರು ಕಾಲೇಜಿನ ಜಾಹೀರಾತುಗಳ ಬಗ್ಗೆ ಎಚ್ಚರದಿಂದ ಇರಿ' ಎಂದೂ ವರದಿಗಳು ಬಂದಿವೆ. ನಾನೂ ಕೂಡಾ ೮–೧೦–೮೬ರಲ್ಲಿ ಕಂಪ್ಲೇಂಟ್ ಕೊಟ್ಟಿದ್ದೇನೆ. ೧೯೮೬ರಲ್ಲಿ ಕಂಪ್ಲೇಂಟ್ ಕೊಟ್ಟೆ, ೧೯೮೪ರಲ್ಲಿ ಕೊಟ್ಟೆ ೧೯೮೫ರಲ್ಲಿ ಕೊಟ್ಟಿದ್ದೇನೆ. ಆದರೂ ಇವನ್ನೆಲ್ಲಾ ಮುಚ್ಚಿಟ್ಟು ಏನೋ ವ್ಯವಹಾರ ನಡೆಸುತ್ತಿದ್ದಾರೆ ಏತಕ್ಕೆ ? ಈ ಕಾಲೇಜು ಹೈಸ್ಕೂಲ್ ಲೆವೆಲ್‌ನಲ್ಲಿ ನಡೆಯುತ್ತಿದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಇದಕ್ಕೆ ೧೯೮೨–೮೧ರಲ್ಲಿ ಪರ್ಮಿಷನ್ ಕೊಟ್ಟಿದ್ದಾರೆ. ಏನು ಕಾಲೇಜು ನಡೆಸುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೋ ಅಥವಾ ಸಂಬಳ ತಿನ್ನುವುದಕ್ಕೆ, ದುಡ್ಡು ಮಾಡಿಕೊಳ್ಳುವುದಕ್ಕೋಸ್ಕರ ಕಾರ್ಯದರ್ಶಿಯವರಿಗೆ ಏನಾದರೂ ಸಪೋರ್ಟ್ ಮಾಡುತ್ತಿದ್ದಾರೋ ಇದು ಒಂದು ಎರಡನೆಯದಾಗಿ, ಇಷ್ಟೆಲ್ಲಾ ಗೊತ್ತಿದ್ದಮೇಲೂ. ಈ ಸಂಸ್ಥೆಗೆ ಕಾಲೇಜನ್ನು ನಡೆಸುವುದಕ್ಕೆ ಆಗುವುದಿಲ್ಲ ಎಂಬುದು ನಿಮ್ಮ ಗಮನಕ್ಕೂ ಬಂದಿದೆ ಸರಕಾರವೇ ಏತಕ್ಕೆ ಇದನ್ನು ವಹಿಸಿಕೊಂಡು ನಡೆಸಬಾರದು ?

ಶ್ರೀ ಡಿ. ಮಂಜುನಾಥ್.— ಸ್ವಾಮಿ ಅಧಿಕಾರಿಗಳು ಇವರ ಜೊತೆಗೆ ಸೇರಿ ಅವ್ಯವಹಾರ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ, ಅದನ್ನು ನಾನು ಒಪ್ಪುವುದಿಲ್ಲ. ಇದು ಒಂದು ಖಾಸಗಿ ಶಾಲೆ, ಇವರು ತಮ್ಮ ಕಾಲೇಜನ್ನು ಸರಕಾರಿ ಕಟ್ಟಡದಲ್ಲಿ ನಡೆಸುತ್ತಿದ್ದಾರೆ ಎಂಬುದನ್ನು ತಿಳಿದು ನನಗೆ ಆಶ್ಚರ್ಯವಾಯಿತು, ಯಾರು ಇದಕ್ಕೆ ಪರವಾನಗಿ ಕೊಟ್ಟರು ಎಂದು ದಾಖಲೆ ಸಿಕ್ಕಿಲ್ಲ. ಇವತ್ತು ನಾನು ಒಂದು ಆಜ್ಞೆ ಮಾಡಿರುತ್ತೇನೆ. ಒಬ್ಬ ಉನ್ನತ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟು ಅದನ್ನೆಲ್ಲಾ ತನಿಖೆ ಮಾಡಿಸುತ್ತೇನೆ. ಇದನ್ನು ಸರಕಾರವೇ ತೆಗೆದುಕೊಳ್ಳಬೇಕೆಂದು ಸಾರ್ವಜನಿಕರಿಂದ ಅರ್ಜಿ ಬಂದಿದೆ, ಈ ಖಾಸಗಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಏನಿದ್ದಾನೆ, ಇವನು ಸರಕಾರಕ್ಕೆ ಮೋಸ ಮಾಡಿದ್ದಾನೆ ಎಂಬುದೂ ನನ್ನ ಗಮನಕ್ಕೆ ಬಂದಿದೆ. ಅಲ್ಲಿ ಏನಾಗಿದೆ ಎಂದರೆ ಅಲ್ಲಿಗೆ ಸಿರಾ ೨೦ ಮೈಲಿ, ತಂಮಕೂರು ೩೦ ಮೈಲಿ ಗುಬ್ಬಿಯೂ ೨೦ ಮೈಲಿ ಇದ್ದು ಅಲ್ಲಿಗೆ ಹೈಸ್ಕೂಲ್ ವಿದ್ಯಾರ್ಥಿಗಳು ಸಾಕಷ್ಟು ಬರುತ್ತಿದ್ದಾರೆ ಅಲ್ಲಿ ಕಾಲೇಜಿನ ಆವಶ್ಯಕತೆ ಇದೆ. ಅಲ್ಲಿ ಖಾಸಗಿ ವಿದ್ಯಾ ಸಂಸ್ಥೆಗೆ ಪರವಾನಗಿ ಕೊಟ್ಟು ಅನ್ಯಾಯ ಆಗಿದೆ. ಇದನ್ನು ನಾನು ಒಪ್ಪುತ್ತೇನೆ. ಇದನ್ನು ಸರಕಾರ ತೆಗೆದುಕೊಳ್ಳಬೇಕೆಂದು ಸಾರ್ವಜನಿಕರಿಂದ ಅರ್ಜಿ ಬಂದಿದೆ, ಶಿವನಂಜಪ್ಪನವರೂ ಹೇಳಿದ್ದಾರೆ ಇದನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ಮಾಡುತ್ತೇನೆ.

ಅಧ್ಯಕ್ಷರು.— ಈಗಾಗಲೇ ೧೨ ಗಂಟೆ ಆಗಿದೆ. ಆರ್.ಎನ್. ನಾಯಕ್, ಪ್ರತಾಪಚಂದ್ರ ಶೆಟ್ಟಿ, ಎಂ. ಶಿವಣ್ಣ, ಇವರ ಕೊಶ್ಚನ್‌ಗಳನ್ನು ಲ್ಯಾಪ್ಸ್ ಮಾಡಬಹುದಾಗಿತ್ತು. ಆದರೆ ನಾನು ಲ್ಯಾಪ್ಸ್ ಮಾಡುವುದಿಲ್ಲ, ಅವಕಾಶ ಕೊಡುತ್ತೇನೆ, ನಾಳೆಯಿಂದ ಯಾರೂ ಎರಡಕ್ಕಿಂತ ಹೆಚ್ಚು ಸಪ್ಲಿಮೆಂಟರಿ ಕೇಳಬಾರದು. ಟೈಮ್ ಆಗಿದ್ದರೂ ಲ್ಯಾಪ್ಸ್ ಮಾಡುವುದಿಲ್ಲ. ಮುಂದಿನ ಸಲ ನೀವು ಇದನ್ನು ತಿಳಿದುಕೊಳ್ಳಬೇಕು. ಹೆಚ್ಚು ಸಪ್ಲಿಮೆಂಟರಿ ಕೇಳಬಾರದು.

ಶ್ರೀ ಆರ್.ಎನ್. ನಾಯಕ್.—ತಮ್ಮ ದೊಡ್ಡ ಮನಸ್ಸಿಗೆ ನಾನು ಆಭಾರಿಯಾಗಿದ್ದೇನೆ.

## ಭಟ್ಕಳದಲ್ಲಿ ಮಾಧ್ಯಮಿಕ ಶಾಲೆ ಪ್ರಾರಂಭ

**೭೪೫ ಶ್ರೀ ಆರ್.ಎನ್. ನಾಯಕ್ಕ (ಭಟ್ಕಳ).—ಮಾನ್ಯ ಶಿಕ್ಷಣಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?**

**ಅ) ರಾಜ್ಯದಲ್ಲಿ ೧೯೬೬ನೇ ವರ್ಷಕ್ಕೆ ವರ್ಷಕ್ಕೆ ಎಷ್ಟು ಸರ್ಕಾರಿ ಮಾಧ್ಯಮಿಕ ಶಾಲೆಗಳನ್ನು ಹಾಗೂ ಖಾಸಗಿ ಮಾಧ್ಯಮಿಕ ಶಾಲೆಗಳನ್ನು ಕೋರಿ ಬೇಡಿಕೆ ಬಂದಿದ್ದವು ?**

**ಆ) ಸರ್ಕಾರ ಅನುಮತಿ ನೀಡಿದ ಶಾಲೆಗಳು ಎಷ್ಟು ಅವುಗಳಲ್ಲಿ ಆಂಗ್ಲ ಭಾಷೆಯ ಶಾಲೆಗಳು ಎಷ್ಟು ?**

**ಇ) ಭಟ್ಕಳ ತಾಲ್ಲೂಕಿನಲ್ಲಿ ಮಾಧ್ಯಮಿಕ ಶಾಲೆಗಳನ್ನು ತೆರೆಯಲು ಅನುಮತಿ ಕೋರಿ ಬೇಡಿಕೆ ಬಂದಿತ್ತೆ, ಸ್ಥಳೀಯ ಶಾಸಕರಿಂದ ಈ ಬಗ್ಗೆ ಒತ್ತಾಯವಿತ್ತೆ ? ಯಾವ ಸಂಸ್ಥೆ ಅನುಮತಿ ಕೋರಿತ್ತು ?**

**ಈ) ಬರುವ ಶೈಕ್ಷಣಿಕ ವರ್ಷದಿಂದಲಾದರೂ ಭಟ್ಕಳ ತಾಲ್ಲೂಕಿಗೆ ಹೊಸ ಮಾಧ್ಯಮಿಕ ಶಾಲೆಗೆ ಮಂಜೂರಾತಿ ನೀಡಲಾಗುವುದೇ ?**

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ರಾಜ್ಯದಲ್ಲಿ ೧೯೬೬-೬೭ನೇ ಸಾಲಿಗೆ ೨೯೨ ಸರ್ಕಾರಿ ಪ್ರೌಢಶಾಲೆ ಹಾಗೂ ೬೫೬ ಖಾಸಗಿ ಪ್ರೌಢಶಾಲೆಗಳ ಮಂಜೂರಾತಿಗೆ ಅರ್ಜಿಗಳು ಬಂದಿದ್ದವು.

೧೯೬೬-೬೭ನೇ ಸಾಲಿಗೆ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿಲ್ಲ. ೨೦ ಖಾಸಗಿ ಪ್ರೌಢಶಾಲೆಗಳನ್ನು ಆರಂಬಿಸಲು ಅವಮಂತಿ ನೀಡಲಾಗಿದ್ದು ಇವುಗಳಲ್ಲಿ ೧೦ ಶಾಲೆಗಳು ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳು ಇರುತ್ತವೆ.